ಶ್ರೀ ವಿ. ಸುನೀಲ್ ಕುಮಾರ್(ಕಾರ್ಕಳ) : ಮಾನ್ಯ ಅಧ್ಯಕ್ಷರೆ, ಇತ್ತೀಚೆಗೆ ಕೊಲ್ಲೂರು ಮೂಕಾಂಬಿಕ ದೇವಸ್ಥಾನದ ಆವರಣದಲ್ಲಿ ಶ್ರೀ ವಿಮಲಾನಂದ ಸ್ವಾಮೀಜಿಯವರ ದಫನ್ ಆಗಿದೆ ಎನ್ನುವ ಹಿನ್ನೆಲೆಯಲ್ಲಿ ದೇವಾಲಯದ ಆವರಣವು ಅಪವಿತ್ರ ಆಗಿದೆ ಎಂದು ಹೇಳಿ ಕಳೆದ ಒಂದು ವಾರದಿಂದ ಅಲ್ಲಿರುವಂತಹ ಜನರು ದೊಡ್ಡ ಪ್ರಮಾಣದ ಹೋರಾಟವನ್ನು ಮಾಡುತ್ತಿದ್ದಾರೆ. ಇದನ್ನು ಕುರಿತು ಕೊಲ್ಲೂರಿನಲ್ಲಿ ಬಂದ್ ಕೂಡ ಆಗಿತ್ತು. ಅಲ್ಲಿ ದಫನ್ ಮಾಡಿರುವುದನ್ನು ತೆಗೆಯಬೇಕು, ಅಲ್ಲಿರುವ ಮೃತ ದೇಹವನ್ನು ಹೊರ ತೆಗೆಯಬೇಕೆಂಬ ಒತ್ತಾಯವನ್ನು ಮಾಡುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಸರ್ಕಾರದ ನಿಲುವೇನು? ದಫನ್ ಮಾಡಿರುವುದನ್ನು ತೆಗೆಯುವ ಬಗ್ಗೆ ಸರ್ಕಾರ ಒಪ್ಪಿಕೊಂಡಿದೆಯೇ ಅಥವಾ ಇನ್ಯಾರೋ ಅಲ್ಲಿ ಮರಣ ಹೊಂದಿದರೆ ಅವರಿಗೆ ಅಲ್ಲಿ ಅಂತ್ಯಕ್ರಿಯೆ ಮಾಡುವುದಕ್ಕೆ ಅವಕಾಶವನ್ನು ಕೊಡುತ್ತೀರಾ ?

ಅಧ್ಯಕ್ಷರು : ಇದರಿಂದಾಗಿ ಅಲ್ಲಿ ಗೊಂದಲ್ಲ ಆಗುತ್ತಿದೆ ಅದನ್ನು ತೆಗೆಯಬೇಕು.

ಶ್ರೀ ಟಿ.ಬಿ.ಜಯಚಂದ್ರ(ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಸಚಿವರು): ಮಾನ್ಯ ಅಧ್ಯಕ್ಷರೆ, ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ನಾಳೆ ಉತ್ತರ ಕೊಡುತ್ತೇವೆಂದು ಹೇಳಿದ್ದಾರೆ, ನಾಳೆ ದಿನ ಮಾನ್ಯ ಮುಖ್ಯಮಂತ್ರಿಗಳೇ ಉತ್ತರವನ್ನು ಕೊಡುತ್ತಾರೆ.

ಅಧ್ಯಕ್ಷರು : ಆಯಿತು. ಮಾನ್ಯ ಜಗದೀಶ್ ಶೆಟ್ಟರ್‌ರವರೆ ತಾವು ಕೇಳಿ.

6. ವಿಷಯ: ಮನೆಗಳ ಹಂಚಿಕೆಯಲ್ಲಿ ತಾರತಮ್ಯ

ಶ್ರೀ ಜಗದೀಶ್ ಶೆಟ್ಟರ್(ಮಾನ್ಯ ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಇದು ಮಾನ್ಯ ವಸತಿ ಸಚಿವರಾದ ಶ್ರೀ ಎಂ.ಹೆಚ್.ಅಂಬರೀಷ್‌ರವರಿಗೆ ಬರುತ್ತದೆ. ಇವರು ಎಲ್ಲರನ್ನೂ equal ಆಗಿ ನೋಡುತ್ತಿದ್ದವರು ಏಕೋ ಏನೋ ಸ್ವಲ್ಪ ತಾರತಮ್ಮ ಮಾಡುವುದಕ್ಕೆ ಚಾಲೂ ಮಾಡಿದ್ದಾರೆ. ಈಗ ಇತ್ತೀಚೆಗೆ ಮಾರ್ಚಿ 4ನೇ ತಾರೀಖು ಮತ್ತು ಜೂನ್ 5ನೇ ತಾರೀಖಿನಂದು ಎರಡು Circularಗಳನ್ನು ಹೊರಡಿಸಿದ್ದಾರೆ. ಕೇವಲ ಕಾಂಗ್ರೆಸ್ ಪಕ್ಷದ ಶಾಸಕರು ಎಲ್ಲಿ ಇದ್ದಾರೆ, ಅವರಿಗೆ ಅಟಲ್ ಬಿಹಾರಿ ವಾಜಪೇಯಿ ವಸತಿ ಯೋಜನೆಯಲ್ಲಿ ಸರ್ಕಾರವು 500 ಮನೆಗಳನ್ನು

15 ಜನ ಶಾಸಕರುಗಳಿಗೆ ಅಲಾಟ್ ಮಾಡಿದ್ದೀರಿ. 2013–14ನೇ ಸಾಲಿನಲ್ಲಿ ಮತ್ತೆ ಹೆಚ್ಚುವರಿಯಾಗಿ 86 ಜನ ಶಾಸಕರಿಗೆ 42,800 ಮನೆಗಳನ್ನು ಹೆಚ್ಚುವರಿಯಾಗಿ ಅಲಾಟ್ ಮಾಡಿದ್ದಾರೆ. ಇವೆಲ್ಲವೂ ಪೂರ್ತಿ ಕಾಂಗ್ರೆಸ್ ಶಾಸಕರು ಇರುವಂತಹ ಕ್ಷೇತ್ರಗಳಾಗಿವೆ. ಅಂದರೆ ಇಡೀ ರಾಜ್ಯದಲ್ಲಿ ಬೇರೆ ಕ್ಷೇತ್ರಗಳು ಇಲ್ಲವೆಂದು ತಿಳಿದುಕೊಂಡಿದ್ದಾರೋ ಆಥವಾ ಅಲ್ಲಿ ಬಡಜನರು ಇಲ್ಲವೆಂದು ತಿಳಿದುಕೊಂಡಿದ್ದಾರೋ? ಈ ರೀತಿಯಾಗಿ ಹೆಚ್ಚುವರಿ ಮನೆಗಳನ್ನು ಕೇವಲ ಭಾರತೀಯ ಜನತಾಪಕ್ಷದ ಶಾಸಕರ ಕ್ಷೇತ್ರಗಳಿಗಿಲ್ಲ, ಮತ್ತು ಜೆಡಿ(ಎಸ್) ಪಕ್ಷದ ಶಾಸಕರ ಕ್ಷೇತ್ರಗಳಿಗಿಲ್ಲ. ಏತಕ್ಕಾಗಿ ತಾವು ತಾರತಮ್ಯವನ್ನು ಮಾಡುತ್ತಿದ್ದೀರೆಂದು ನನಗೆ ಅರ್ಥವಾಗುತ್ತಿಲ್ಲ. ತಾರತಮ್ಯವಾಗಿರುವುದನ್ನು ತಾವು ಸರಿಪಡಿಸಬೇಕು. ಈ ರೀತಿ ಇರುವುದನ್ನು ನೀವು ಕ್ಯಾನ್ಸಲ್ ಮಾಡಿ ಎಲ್ಲಾ ಕ್ಷೇತ್ರಕ್ಕೂ ಅಲಾಟ್ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತಿದ್ದೇನೆ.

(ಗೊಂದಲ)

ಶ್ರೀ ಗೋವಿಂದ ಎಂ ಕಾರಜೋಳ :ಈ ಸರ್ಕಾರವು ಕೇವಲ ಕಾಂಗ್ರೆಸ್ ಶಾಸಕರುಗಳು ಗೆದ್ದಿರುವ ಕಡೆ ಇರುವಂತಹ ಸರ್ಕಾರವೇ ?

(ಗೊಂದಲ)

ಶ್ರೀ ಕೆ.ಗೋಪಾಲ ಪೂಜಾರಿ : ಮನೆಗಳನ್ನು ಕೊಡುವಂತಹ ವಿಚಾರದಲ್ಲಿ ಈ ರೀತಿಯಾಗಿ ರಾಜಕೀಯ ಮಾಡುವುದು ಬೇಡ, ಸರಿಸಮಾನವಾಗಿ ಮಾಡಿ.

(ಗೊಂದಲ)

ಅಧ್ಯಕ್ಷರು : ಮಾನ್ಯ ಸಚಿವರು ಉತ್ತರವನ್ನು ಕೊಡಲಿ.

4. ವಸತಿ ಸಚಿವರ ಹೇಳಿಕೆ

ಶ್ರೀ ಎಂ.ಹೆಚ್. ಅಂಬರೀಶ್ (ಮಾನ್ಯ ವಸತಿ ಸಚಿವರು) : ಮಾನ್ಯ ಅಧ್ಯಕ್ಷರೆ, ಉತ್ತರವನ್ನು ನಾನು ಕೊಡುವ ಮುಂಚೆಯೇ ವಿರೋಧ ಪಕ್ಷದ ಸದಸ್ಯರು ಈ ರೀತಿ ಕಿರುಚಾಡಿದರೆ ಹೇಗೆ? ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಜಗದೀಶ್